**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 23.01.2025**

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ ಸಿ ಎಸ್ ವಕೀಲರಿಂದ**

ಉಳಿದ **6** ಚೆಕ್ಕುಗಳಿಗೆ ಸಂಬಂಧಿಸಿದಂತೆ ಏನಾಯಿುತು ಎಂದು ನಾನು ದೂರನ್ನು ನೀಡಿರುವುದಿಲ್ಲ. ಆದರೆ ಬ್ಯಾಂಕ್‌ಗೆ ಅದನ್ನು ತಡೆಯಿಡಿಯುವಂತೆ ಸೂಚಿಸಿರುತ್ತೇನೆ . ಬ್ಯಾಂಕ್ ಗೆ ನಾನು ಪಿರ್ಯಾದಿಗೆ ನೀಡಿದ ಚೆಕ್ಕು ಅವರು ವಾಪಸ್ಸು ನೀಡುತ್ತಿಲ್ಲ ಎಂದು ಹೇಳಿ ಅದನ್ನು ತಡೆಯಿುಡಿಯುವಂತೆ ಅರ್ಜಿಯನ್ನು ನೀಡಿದ್ದು ಅದರ ಪ್ರತಿ ನನ್ನ ಬಳಿ ಇರುವುದಿಲ್ಲ. ಎಲ್ಲಾ ಚೆಕ್ಕುಗಳನ್ನು ತಡೆಯಿುಡುವಂತೆ ಬ್ಯಾಂಕ್ ಗೆ ನೀಡಿರುವ ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ . ನಿಡಿ **1** ಈ ಪ್ರಕರಣದ ಚೆಕ್ಕಿಗೆ ಹೊರತುಪಡಿಸಿ ಬೇರೆ ಚೆಕ್ಕಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿ . ಪಿರ್ಯಾದಿ ತಾಯಿ ಚೆಕ್ಕನ್ನು ವಾಪಸ್ಸು ನೀಡುತ್ತಿಲ್ಲ ಎಂದು ನಾನು ಅವರ ವಿರುದ್ದ ಯಾವುದೆ ದೂರು ದಾಖಲಿಸಿರುವುದಿಲ್ಲ. ಪಿರ್ಯಾದಿಯ ತಾಯಿಗೆ ಚೆಕ್ಕನ್ನು ವಾಪಸ್ಸು ನೀಡುವಂತೆ ನಾನು ನೋಟಿಸು ನೀಡಿರುವುದಿಲ್ಲ. ಅವರ ಚೆಕ್ಕನ್ನು ನೀಡಿಲ್ಲ ಎಂದು ಅವರ ವಿರುದ್ದ ಖಾಸಗಿ ದೂರನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವುದರಿಂದ ಅವರ ವಿರುದ್ದ ಯಾವುದೆ ಕ್ರಮ ಕೈಗೊಂಡಿಲ್ಲ ಎನ್ನುವವರು .

ನಾನು ಯಾವುದೆ ಬ್ಯಾಂಕ ಅಥವಾ ಫೆನಾನ್ಸ ನಲ್ಲಿ ಸಾಲ ಪಡೆದಿರುವುದಿಲ್ಲ. ಪಿರ್ಯಾದಿ ನೋಟಿಸು ನೀಡಿದ ನಂತರ ನಾನು ಯಾುವುದೆ ದೂರು ದಾಖಲಿಸಿರುವುದಿಲ್ಲ. ಪಿರ್ಯಾದಿಯ ತಾಯಿಗೆ ರೂ **30,000/-** ಹಣ ನೀಡಲು ಬಾಕಿ ಇರುವುದರಿಂದ ಅವರು ಅಷ್ಟು ಸಣ್ಣ ಮೊತ್ತಕ್ಕೆ ನ್ಯಾಯಾಲಯಕ್ಕೆ ಹೋಗುವುದಿಲ್ಲ ಎಂಬ ಕಾರಣಕ್ಕೆ ನಾನು ಯಾವುದೆ ಕ್ರಮ

ತೆಗೆದುಕೊಂಡಿರುವುದಿಲ್ಲ. ಸದರಿ ವಿಚಾರವನ್ನು ನಾನು ನನ್ನ ವಕೀಲರಿಗೆ ಹೇಳಿರುವುದಿಲ್ಲ. ಭಾಗ್ಯ ರವರು ರೂ **30,000/-** ಣಹ ಪಿರ್ಯಾದಿ ತಾಯಿಗೆ ನೀಡಲು ಬಾಕಿ ಇದೆ ಎಂದು ನನಗ ತಿಳಿರುವ ವಿಚಾರವನ್ನು ಪ್ರತ್ಯುತ್ತರ ನೋಟಿಸನಲ್ಲಿ ತಿಳಿಸಿದ್ದೀರಾ ಎಂದರ ಸಾಕ್ಷಿ ಚೀಟಿ ವ್ಯವಹಾರಕ್ಕೆ ಭಾಗ್ಯರವರು ಬಾಕಿ ಇರುವ ರೂ **30,000/-** ನೀಡಬೇಕು ಎಂದು ನನಗೆ ತಿಳಿಸಿರುತ್ತಾರೆ ಎನ್ನುವವರು . ಪ್ರತ್ಯುತ್ತರ ನೋಟಿಸನಲ್ಲಿ ರೂ **30,000/-** ಭಾಗ್ಯ ರವರು ನೀಡಲು ಬಾಕಿ ಇತ್ತು ಎಂದು ತಿಳಿಸಿರುವುದಿಲ್ಲ. ಆದರೆ ಚೀಟಿ ಕಂತು ನೀಡಲು ಬಾಕಿ ಇತ್ತು ಎಂದು ತಿಳಿಸಲಾಗಿದೆ . ಭಾಗ್ಯ ರವರು ಚೀಟಿ ಕರೆದಾಗ ಅದಕ್ಕೆ ಜಾಮೀನುದಾರರಾಗಿ ಸಹಿ ಮಾಡಿರುತ್ತೇನೆ . ಸದರಿ ವಿಚಾರವನ್ನು ನಾನು ನನ್ನ ವಕೀಲರಿಗೆ ತಿಳಿಸಿರುವುದಿಲ್ಲ.

ಪ್ರಸ್ತುತ ಭಾಗ್ಯರವರು ರೂ **30,000/-** ಬಾಕಿ ಹಣವನ್ನು ನೀಡಲು ತಯಾರಿದ್ದು ಕಲಾವತಿಯವರು ಅದನ್ನು ಬಡ್ಡಿ ಸಮೇತ ನೀಡುವಂತೆ ಹೇಳುತ್ತಿದ್ದಾರೆ ಎಂದು ಭಾಗ್ಯರವರು ನನಗೆ ತಿಳಿಸಿರುತ್ತಾರೆ . ಭಾಗ್ಯರವರು ನನ್ನ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದು ಕಲಾವತಿಯ ವಿರುದ್ದ ಯಾವುದೆ ದೂರು ದಾಖಲಿಸಿರುವುದಿಲ್ಲ.

ಮುಂದುವರಿದ ಪಾಟಿ ಸವಾಲನ್ನು ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು .

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ